ಕಾಯಬೇಕು ಅಷ್ಟೇ... ಈ ಸ್ಥಿತಿಯಲ್ಲಿ ನೀವೇನು ಹೊಸದನ್ನು ತೋರುವಿರಿ ಎಂದರೆ... ನನಗೆ ನಾನೇ ಗೊತ್ತಿಲ್ಲ. ನನ್ನ ಕಥೆಗಳೇ ನನಗೆ ನೆನಪಿಲ್ಲ... ಆದರೆ, ಅಸ್ಪಷ್ಟವಾಗಿ ನಾಳೆಯ ಅದೃಶ್ಯ ಭಾವನೆಗಳು ಕನಸಲ್ಲಿ ಬಂದು ತೇಲುತ್ತವೆ. ಕಾಮನಬಿಲ್ಲನ್ನು ಆಕಾಶದಲ್ಲಿ ಹಿಡಿಯಲಾರೆ; ಆದರೆ ಭಾವಿಸಬಲ್ಲೆ.

ಈ ಇಪ್ಪತ್ತೈದು ವರ್ಷಗಳಿಗೂ ಹಿಂದೆ 'ಮಚ್ಚೆ' ಎಂಬ ಒಂದು ಕಥೆಯನ್ನು ಲಂಕೇಶ್ ಪತ್ರಿಕೆಯಲ್ಲಿ ಬರೆದಿದ್ದೆ. ತಾಯಿ ಒಬ್ಬಳು ತಿರಸ್ಕಾರದಲಿ ಮನೆ ಬಿಟ್ಟು ತಾಯಿ ಬಿಟ್ಟು ಹೋದ ಮಗನ ಬಗ್ಗೆ ಸ್ವಗತದಲ್ಲಿ ನೆನೆಯುತ್ತ, 'ಆ ನನ್ನ ಮಗ ನಾನು ಕೊಟ್ಟ ಹೊಕ್ಕುಳ ಗುರುತ ಅಳಿಸಿಕೊಳ್ಳಲು, ಕತ್ತರಿಸಿಕೊಳ್ಳಲು ಸಾಧ್ಯವೇ...' ಎಂದು ಭಾವಿಸಿ ಹೆಪ್ಪುಗಟ್ಟಿದ ಕಣ್ಣೀರ ತುಳುಕಿಸುವಳು. ನನ್ನ ಒಂದೊಂದು ಕಥೆಗಳೂ ಆ ಹೊಕ್ಕುಳ ಬಳ್ಳಿಯ ಒಂದೊಂದು ಕೊಂಡಿಗಳು. ಕಥೆ ಬರೆದ ಮೇಲೆ ಆ ನೆನಪಿನ ಗಾಯದ ಗುರುತು ಮನದಲ್ಲಿ ಮತ್ತೆ ಮತ್ತೆ ಕಾಣಿಸುತ್ತಲೇ ಇರುತ್ತದೆ. ಅದನ್ನು ನಾನೆಲ್ಲೂ ಬಚ್ಚಿಡಲಾರೆ. ನನ್ನ ಸುತ್ತಣ ಸಮಾಜ, ಲೋಕ, ಸುಶಿಕ್ಷಿತ ವಲಯ ಮರೆ ಮಾಡಿರುತ್ತದೆ. ಹೀಗೆಯೇ ಒಂದು ಕಥೆ ಕೂಡ. ಓದಿದವರು ಕಥೆಯನ್ನು ಸುಲಭವಾಗಿ ಮರೆತೊ, ತುಂಡರಿಸಿಕೊಂಡೊ ಹೊಸ ಕತೆಗಾಗಿ ಕಾತರಿಸಬಹುದು; ಆದರೆ ನನ್ನ ರೀತಿ ಅಂತಾದ್ದಲ್ಲ. ನಾನು ಬರೆದ ಕಥೆಗಳೆಲ್ಲ ನನ್ನ ಬೆನ್ನ ಹಿಂದೆಯೇ ಜೀವಂತವಾಗಿ ಎದ್ದು ಬಂದು ನಿಂತಿರುತ್ತವೆ. ಅವುಗಳಿಗೆ ಏನನ್ನು ಕೊಡಬೇಕೊ... ಅದು ಸಾಧ್ಯವಾಗದೇ ವಾಸ್ತವದ ಜೊತೆ ವ್ಯಗ್ರವಾಗಿರುತ್ತೇನೆ. ಕಥೆಗಳ ಹೊಕ್ಕುಳ ಬಳ್ಳಿ ಭಾಷೆಯಲ್ಲಿ ತುಂಡಾಗಿದ್ದರೂ, ಭಾವ ಜಗತ್ತಿನಲ್ಲಿ ಅವೆಲ್ಲವೂ ನನ್ನ ನೆರಳಿನಂತೆ ನನ್ನ ಹಿಂದೆಯೇ ಬಂದಿರುತ್ತವೆ.

⌘


## ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'-ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ **ಖಾತೆ ಸಂಖ್ಯೆ**: 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್ಎಸ್ ಕೋಡ್ **ಎಸ್‌ಬಿಐಎನ್**0040006.

**ಚಂದಾ ವಿವರ (ಅಂಚೆ ವೆಚ್ಚ ಸೇರಿ)**

ದೇಶದ ಒಳಗೆ


ವಾರ್ಷಿಕ : ₹. 264.00 (12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ: ₹. 132.00 (6 ಸಂಚಿಕೆಗಳಿಗೆ)

ವಿದೇಶಗಳಿಗೆ

ವಾರ್ಷಿಕ: ₹. 1320.00 (12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ: ₹. 660.00 (6 ಸಂಚಿಕೆಗಳಿಗೆ)

ಚಂದಾ ಕಳುಹಿಸಿದವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು.






ಪ್ರಸರಣ ವಿಭಾಗ
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು– 560 001
ದೂರವಾಣಿ: 080–25880199, 219
ಇ–ಮೇಲ್: circulation-blore@deccanherald.co.in